# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ - ಮಾರಾಟ ತೆರಿಗೆ ಮರುಪಾವತಿ ಎಂಬ ಹೊಸ ಯೋಜನೆಯನ್ನು 2015-16ನೇ ಸಾಲಿನಿಂದ ಜಾರಿಗೊಳಿಸುವ ಬಗ್ಗೆ.

C-11480

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/57/ಪಂವಾಯೋ (1)/2015, ದಿನಾಂಕ: 16-04-2015 ಮತ್ತು 13-05-2015.

******

## ಪ್ರಸ್ತಾವನೆ

ರಾಜ್ಯ ಸರ್ಕಾರವು 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಇನ್ನು ಮುಂದೆ ಮಾರಾಟ ಕರ ರಿಯಾಯಿತಿಯ ಬದಲು, ಯಾಂತ್ರೀಕೃತ ದೋಣಿಗಳಿಗೆ 1,50,000 ಕಿಲೋ ಲೀಟರ್ ಡೀಸೆಲ್ ಮೇಲೆ ಮಾರಾಟ ಕರವನ್ನು ಮರುಪಾವತಿಯ ರೂಪದಲ್ಲಿ ನೇರವಾಗಿ ದೋಣಿ ಮಾಲೀಕರ ಖಾತೆಗೆ ವರ್ಗಾಯಿಸಲಾಗುವುದು. ಇದಕ್ಕಾಗಿ 105 ಕೋಟಿ ರೂ.ಗಳ ಪ್ರತ್ಯೇಕ ಅನುದಾನವನ್ನು ಒದಗಿಸಲಾಗುವುದು" ಎಂದು ಘೋಷಿಸಿರುತ್ತದೆ.

ಮೇಲೆ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆರವರ ಪತ್ರಗಳಲ್ಲಿ, ಕರ್ನಾಟಕ ರಾಜ್ಯವು ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ. ಹೆಚ್ಚಿನ ಮೀನು ಉತ್ಪಾದನೆಯು ಯಾಂತ್ರೀಕೃತ ದೋಣಿಗಳಿಂದ ಬಂದಿರುತ್ತದೆಂದು, ಸುಮಾರು 3777 ಯಾಂತ್ರೀಕೃತ ದೋಣಿಗಳು ಕರಾವಳಿ ಜಿಲ್ಲೆಗಳಲ್ಲಿ ಕಾರ್ಯಾಚರಣೆಯಲ್ಲಿರುತ್ತವೆ. ಯಾಂತ್ರೀಕೃತ ಮೀನುಗಾರಿಕೆಯಲ್ಲಿ ಡೀಸೆಲ್ ಮೇಲಿನ ವೆಚ್ಚವು ಅತಿ ಮುಖ್ಯ ವೆಚ್ಚವಾಗಿರುತ್ತದೆಂದು, ಯಾಂತ್ರೀಕೃತ ಮೀನುಗಾರಿಕೆಯು ಡೀಸೆಲ್ ಬೆಲೆ ಹೆಚ್ಚಳದಿಂದಾಗಿ ಲಾಭದಾಯಕವಾಗದಿರುವ ಪರಿಣಾಮ ಯಾಂತ್ರಿಕ ಮೀನುಗಾರಿಕೆಗೆ ಬಳಸುವ ಡೀಸೆಲ್ ಮೇಲಿನ ರಾಜ್ಯ ಮಾರಾಟ ಕರವನ್ನು ಪೂರ್ಣವಾಗಿ ವಿನಾಯಿತಿಗೊಳಿಸಿದ ಡೀಸೆಲ್‌ನ್ನು ಯಾಂತ್ರಿಕ ಮೀನುಗಾರಿಕೆ ದೋಣಿಗಳಿಗೆ ಪೂರೈಸುವ ಯೋಜನೆಯನ್ನು 1999-2000 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿಯಲ್ಲಿ ಕರಮುಕ್ತ ಡೀಸೆಲ್‌ನ್ನು ಯಾಂತ್ರೀಕ ದೋಣಿಗಳಿಗೆ ಪೂರೈಸುವುದರಿಂದ ಪ್ರತಿ ಲೀಟರ್ ಡೀಸೆಲ್‌ಗೆ ಸುಮಾರು ರೂ.7.00 ರಷ್ಟು ಸಹಾಯಧನ ಮೀನುಗಾರರಿಗೆ ದೊರಕಿದಂತಾಗುತ್ತದೆ ಎಂದು ತಿಳಿಸಿರುತ್ತಾರೆ.

ಮುಂದುವರೆದು, ದೋಣಿಗಳಿಗೆ ನಿಗದಿಪಡಿಸಿದ ಕೋಟಾಕ್ಕಿಂತ ಹೆಚ್ಚಿನ ಡೀಸೆಲ್ ಕೋಟಾ ವಿತರಣೆಯಾಗುತ್ತಿರುವುದರಿಂದ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ರಾಷ್ಟ್ರೀಯ ಸೂಚನ ವಿಜ್ಞಾನ ಕೇಂದ್ರ (NIC), ಬೆಂಗಳೂರು ಇವರಿಂದ ಒಂದು ಸಾಫ್ಟ್‌ವೇರ್ ತಯಾರಿಸಿ ಅನುಷ್ಠಾನಗೊಳಿಸಲು ಹಾಗೂ ಇಲಾಖಾ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ: ಪಸಂಮೀ/68/ಮೀಇಯೋ/2015 (ಭಾ-2), ಬೆಂಗಳೂರು ದಿನಾಂಕ: 04-08-2015</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, "ಯಾಂತ್ರೀಕೃತ ದೋಣಿಗಳಿಗೆ 1,50,000 ಕಿ.ಲೀ. ಡೀಸೆಲ್ ಮೇಲೆ ಮಾರಾಟ ಕರವನ್ನು ಮರುಪಾವತಿಯ ರೂಪದಲ್ಲಿ ನೇರವಾಗಿ ದೋಣಿ ಮಾಲೀಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್-ಮಾರಾಟ ತೆರಿಗೆ ಮರುಪಾವತಿ" ಎಂಬ ಹೊಸ ಯೋಜನೆಯನ್ನು 2015-16ನೇ ಸಾಲಿನಿಂದ ಈ ಆದೇಶದ **<u>ಅನುಬಂಧ</u>**ದಲ್ಲಿ ನಮೂದಿಸಿರುವ ಮಾರ್ಗಸೂಚಿಗಳಂತೆ ಜಾರಿಗೆ ತರಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ/33/ಪಿಎಫ್ಒ/2015, ದಿನಾಂಕ: 04-06-2015 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/455/ವೆಚ್ಚ-4/2015, ದಿನಾಂಕ: 22-06-2015 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

4/8/15

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

4/8

**ಇವರಿಗೆ:**

1) ಮಹಾಲೇಖಪಾಲರು (ಎ ಮತ್ತು ಇ)(ಎಯು-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ 375/2015)
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4).
7) ಸಂಬಂಧಪಟ್ಟ ಅಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
8) ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು / ಸಮನ್ವಯ--ಕಂಪೆಂಡಿಯಂ.

ಆದೇಶ ಸಂಖ್ಯೆ: ಪಸಂಮೀ/68/ಮೀಇಯೋ/2015(ಭಾ-2), ಬೆಂಗಳೂರು ದಿನಾಂಕ: 04-08-2015 ರ

## ಅನುಬಂಧ

**"ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ – ಮಾರಾಟ ತೆರಿಗೆ ಮರುಪಾವತಿ" ಎಂಬ ಹೊಸ ಯೋಜನೆಯ ಅನುಷ್ಠಾನಕ್ಕಾಗಿ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು**

(1) ಸಹಾಯಧನ ಪಡೆಯುವ ಯಾಂತ್ರೀಕೃತ ದೋಣಿಗಳು ಮೀನುಗಾರಿಕೆ ಇಲಾಖೆಯಲ್ಲಿ ನೋಂದಣಿಯಾಗಿರತಕ್ಕದ್ದು ಹಾಗೂ ಮೀನುಗಾರಿಕೆ ಮಾಡಲು ಇಲಾಖೆಯಿಂದ ಪರವಾನಗಿಯನ್ನು ಪಡೆದಿರಬೇಕು. ನೋಂದಣಿ ಹಾಗೂ ಪರವಾನಗಿಯು ಚಾಲ್ತಿಯಲ್ಲಿರಬೇಕು.

(2) ಡೀಸೆಲ್‌ನ್ನು ಇಲಾಖೆಯಿಂದ ಅನುಮೋದಿತ ಡೀಸೆಲ್ ಬಂಕ್‌ಗಳಲ್ಲಿ ಮಾತ್ರ ಖರೀದಿಸತಕ್ಕದ್ದು. ದೋಣಿಯ ಮಾಲೀಕರು ಅಥವಾ ಅವರ ಅಧಿಕೃತ ಪ್ರತಿನಿಧಿಯು ಡೀಸೆಲ್ ಖರೀದಿಸುವಾಗ ಬಯೋಮೆಟ್ರಿಕ್ ಗುರುತನ್ನು ಅಥವಾ ರಸೀದಿಯ ಮೇಲೆ ಸಹಿಯನ್ನು ದಾಖಲಿಸುವುದು. ಈ ಉದ್ದೇಶಕ್ಕಾಗಿ ಪ್ರತಿ ಫಲಾನುಭವಿಯು ಇಲಾಖೆಯು ನಿಗದಿಪಡಿಸುವ ನಮೂನೆಯಲ್ಲಿ ಪಾಸ್‌ಬುಕ್‌ನಲ್ಲಿ ಡೀಸೆಲ್ ವಿತರಣೆಯ ದಾಖಲೆಗಳನ್ನು ಅಧಿಕೃತ ವಿತರಣಾ ಕೇಂದ್ರದವರಿಂದ ದಾಖಲಿಸಿ ಕೊಳ್ಳತಕ್ಕದ್ದು. ಹಾಗೂ ಡೀಸೆಲ್ ಸ್ವೀಕರಿಸಿದ ಬಗ್ಗೆ ಪಾಸ್ ಪುಸ್ತಕದಲ್ಲಿ ದೋಣಿಯ ಮಾಲೀಕರು ಅಥವಾ ಅವರ ಕುಟುಂಬದ ಒಬ್ಬ ನಾಮ ನಿರ್ದೇಶಿತ ಸದಸ್ಯ ಮಾತ್ರ ಸಹಿ ಮಾಡಬೇಕು.

(3) ಯೋಜನೆಯ ಅನುಷ್ಠಾನದಲ್ಲಿ ವಿತರಣೆಯಾಗುವ ಡೀಸೆಲ್ ದುರ್ಬಳಕೆಯನ್ನು ತಡೆಗಟ್ಟಲು ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಯಾವುದೇ ಸಮಯದಲ್ಲಿ ಡೀಸೆಲ್ ವಿತರಣೆಗೆ ಸಂಬಂಧಪಟ್ಟಂತೆ ಮೀನುಗಾರಿಕೆ ಯಾಂತ್ರಿಕ ದೋಣಿಗಳನ್ನು ಹಾಗೂ ಡೀಸೆಲ್ ಬಂಕ್‌ಗಳನ್ನು ಹಾಗೂ ಅಗತ್ಯ ದಾಖಲೆಗಳನ್ನು ಪರಿಶೀಲಿಸುವ ಅಧಿಕಾರವನ್ನು ಹೊಂದಿರುತ್ತಾರೆ.

(4) ಡೀಸೆಲ್ ಬಂಕ್‌ಗಳು ಇಲಾಖೆಯ ನಿರ್ದೇಶನಗಳಂತೆ ಕಾರ್ಯ ನಿರ್ವಹಿಸುವುದು.

(5) ಮೀನುಗಾರಿಕೆ ದೋಣಿಗಳ ಮಾಲೀಕರು ಪ್ರತಿ ತಿಂಗಳು ಮೀನುಗಾರಿಕೆಗೆ ಮಾಡಲಾದ Trip ಸಂಖ್ಯೆ ಹಾಗೂ ಅದರಲ್ಲಿ ಹಿಡಿದ ಮೀನಿನ ವಿವರ ನೀಡತಕ್ಕದ್ದು.

(6) ಸಹಾಯಧನ ಪಡೆಯುವ ಮೀನುಗಾರಿಕೆ ದೋಣಿಗಳ ಮಾಲೀಕರು ಸರ್ಕಾರದ ಯಾವುದೇ ಇಲಾಖೆಗೆ / ಬ್ಯಾಂಕ್‌ಗಳಿಗೆ / ಸಹಕಾರ ಸಂಘಗಳಿಗೆ ಇತ್ಯಾದಿಗಳಿಗೆ ಸುಸ್ತಿದಾರರಾಗಿರಬಾರದು.

(7) ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರ ಮೀನುಗಾರಿಕೆ ಉಪ ನಿರ್ದೇಶಕರಿಗೆ ನೀಡಲಾಗಿದೆ.

(8) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಅಧಿಕೃತ ಅಧಿಕಾರಿಗಳು) ಪ್ರತಿಮಾಹೆ ನೇರವಾಗಿ ದೋಣಿ ಮಾಲೀಕರ ಖಾತೆಗೆ ಹಣ ವರ್ಗಾಯಿಸಲು ಅನುವಾಗಲು ಪ್ರತಿ ತಿಂಗಳು ಆಗುವ ವೆಚ್ಚಕ್ಕೆ ಮೀನುಗಾರಿಕೆ ಉಪ ನಿರ್ದೇಶಕರಿಂದ ಮಂಜೂರಾತಿ ಪಡೆದು ನಂತರ ಖಜಾನೆಯಿಂದ ಸೆಳೆದು ನೇರವಾಗಿ ಮೀನುಗಾರಿಕೆ ಯಾಂತ್ರಿಕ ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ಯೋಜನೆಯ ನಿಯಮಗಳ ಪ್ರಕಾರ ವರ್ಗಾಯಿಸುವುದು.

(9) ಡೀಸೆಲ್ ಮೇಲಿನ ಮಾರಾಟ ಕರದ (VAT) ಲೆಕ್ಕಾಚಾರದ ಹಾಳೆ (costing sheet) ಮೀನುಗಾರಿಕೆ ನಿರ್ದೇಶಕರಿಂದ ಅನುಮೋದಿತವಾಗಿರತಕ್ಕದ್ದು.

(10) ಹಿಂದಿನ ಮೂರು ತಿಂಗಳಲ್ಲಿ ಖರೀದಿಸಿದ ಡೀಸೆಲ್‌ನ ಸರಾಸರಿಯ ಆಧಾರದ ಮೇಲೆ ಆಗಸ್ಟ್-2015 ತಿಂಗಳಿನಲ್ಲಿ ಸಹಾಯಧನವನ್ನು ಮುಂಗಡವಾಗಿ ನೀಡುವುದು. ನಂತರದ ತಿಂಗಳಿನಲ್ಲಿ ಆಯಾ ತಿಂಗಳಿನ ಡೀಸಲ್ ಖರೀದಿಯಂತೆ ಸಹಾಯಧನವನ್ನು ನೇರವಾಗಿ ಫಲಾನುಭವಿಯ ಬ್ಯಾಂಕ್ ಖಾತೆಗೆ ವರ್ಗಾಯಿಸುವುದು. ಹೆಚ್ಚಿನ ಮುಂಗಡವಿದ್ದಲ್ಲಿ, ಅದನ್ನು ನಂತರದ ತಿಂಗಳಿನಲ್ಲಿ ವಸೂಲಾತಿಯ ಮೂಲಕ ಹೊಂದಾಣಿಕೆ ಮಾಡಿಕೊಳ್ಳುವುದು. ಒಂದು ವೇಳೆ ಆಗಸ್ಟ್-2015 ತಿಂಗಳಿನ ಸಹಾಯಧನದ ಮೊತ್ತವು ಮುಂಗಡ ಮೊತ್ತಕ್ಕಿಂತ ಜಾಸ್ತಿಯಿದ್ದಲ್ಲಿ, ಸಹಾಯಧನವನ್ನು ಬಿಲ್ಲಿನಂತೆ ಪಾವತಿಸುವುದು ಮತ್ತು ಯಾವುದೇ ಮುಂಗಡದ ಕಡಿತ ಇರುವುದಿಲ್ಲ.

(11) ಫಲಾನುಭವಿಯು ಯಾವುದೇ ತಿಂಗಳಿನಲ್ಲಿ ಡೀಸಲ್ ಖರೀದಿಸದಿದ್ದರೆ, ಸಹಾಯಧನದ ಪಾವತಿಯನ್ನು ತಡೆಹಿಡಿಯುವುದು. ಸತತವಾಗಿ ಮೂರು ತಿಂಗಳ ಕಾಲ ಸಹಾಯಧನ ಪಡೆಯದಿದ್ದರೆ, ಡೀಸೆಲ್ ವಿತರಣೆಯನ್ನು ಮುಂದಿನ ಆದೇಶದವರೆಗೆ ಮೀನುಗಾರಿಕೆ ಉಪ ನಿರ್ದೇಶಕರು ಸ್ಥಗಿತಗೊಳಿಸುವುದು. ಅಂತಹ ಪ್ರಕರಣಗಳಲ್ಲಿ ಮೀನುಗಾರಿಕೆ ನಿರ್ದೇಶಕರು ಸಕಾರಣಗಳ ಆಧಾರದ ಮೇಲೆ ಡೀಸೆಲ್ ವಿತರಣೆಯನ್ನು ಸ್ಥಗಿತಗೊಳಿಸಿರುವುದನ್ನು ಸ್ಪಷ್ಟವಾದ ಆದೇಶದ ಮೂಲಕ ದೃಢೀಕರಿಸುವುದು ಅಥವಾ ಹಿಂದಕ್ಕೆ ಪಡೆಯುವುದು. ಡೀಸಲ್ ವಿತರಣೆಯನ್ನು ಸ್ಥಗಿತಗೊಳಿಸಿರುವುದನ್ನು ದೃಢೀಕರಿಸಿದರೆ, ನೀಡಿರುವ ಮುಂಗಡವನ್ನು ತಕ್ಷಣ ವಸೂಲಾತಿಗೆ ಕ್ರಮವಹಿಸುವುದು.

(12) ಮೀನುಗಾರಿಕೆ ದೋಣಿಗಳಿಗೆ ಮುಂಗಡ ನೀಡಿರುವ ಮೊತ್ತವನ್ನು ಸರ್ಕಾರಕ್ಕೆ ಹಿಂತಿರುಗಿಸಲು ಬಾಕಿ ಇರುವ ಮೊತ್ತವೆಂದು ದೋಣಿಗಳ ನೋಂದಣಿ ಪ್ರಮಾಣ ಪತ್ರದಲ್ಲಿ ದಾಖಲಿಸುವುದು.

4/8/15

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

4/8